# <u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯಃ ಕೊಪ್ಪ</u>

**ಸಿ.ಸಿ. ನಂ.370/2021**

***<u>ಫಿರ್ಯಾದುದಾರರುಃ</u>*** ಸರ್ಕಾರದ ಪರವಾಗಿ ಕೊಪ್ಪ  ಪೊಲೀಸರು

**ವಿರುದ್ಧ**

***<u>ಆರೋಪಿತರುಃ</u>***

1. ಸುಹೇಲ್ ಬಿನ್ ಇಸ್ಮಾಯಿಲ್ **(ಪ್ರಕರಣವನ್ನು ಪ್ರತ್ಯೇಕಿಸಲಾಗಿದೆ)**
2. ಹರೀಶ್ ಬಿನ್ ಲಕ್ಷ್ಮಣ ಪೂಜಾರಿ, 39 ವರ್ಷ, ಬಿಸಿನೆಸ್, ವಾಸ ಕೈಕಂಬ, ಮಂಗಳೂರು.
3. ಅಬ್ದುಲ್ ಬಿನ್ ಅಬ್ದುಲ್ ರೆಹಮಾನ್ , 32 ವರ್ಷ, ಬಿಸಿನೆಸ್, ವಾಸ ದೇರಲಕಟ್ಟೆ, ಮಂಗಳೂರು.
4. ದೀಪ್ತೀಶ್ ಬಿನ್ ಗಂಗಾಧರ್, 27 ವರ್ಷ, ವ್ಯಾಪಾರ ವೃತ್ತಿ, ವಾಸ ಮತ್ತೂರು, ಕುಲವೂರು ಅಂಚೆ, ದಕ್ಷಿಣ ಕನ್ನಡ ಜಿಲ್ಲೆ.
5. ಅಶ್ವೀತ್ ಕೊಟ್ಯಾರಿ ಬಿನ್ ದಾಮೋದರ್ ಕೊಟ್ಯಾರಿ, 28 ವರ್ಷ, ವಾಸ ಒಡ್ಡೂರು, ಎಡಪದವು, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ.

## <u>ದೋಷಾರೋಪಣೆ</u>

ಶ್ರೀಮತಿ  ನಂದಿನಿ ಎಂ.ಎನ್., ಬಿ.ಎ., ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ಕೊಪ್ಪ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 25.02.2021 ರಂದು ಬೆಳಿಗ್ಗೆ ಸುಮಾರು 11.00 ಗಂಟೆ ಸಮಯದಲ್ಲಿ ಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಯ ಹರಂದೂರು ಪಂಚಾಯ್ತಿ ವ್ಯಾಪ್ತಿಯ ಸರ್ವೆ ನಂಬರ್ 41 ಪಿ ರಲ್ಲಿ ಚಾಸಾ.1 ಹೆಚ್ ಎಸ್ ಅಬ್ದುಲ್ ಖಾದರ್ ರವರು ಚಾಸಾ.2 ಎಸ್ ಅಬ್ದುಲ್ ರಹಿಮಾನ್ ಮತ್ತು ಚಾಸಾ.3 ಮಹಮ್ಮದ್ ಮುಸ್ತಾಫ್ ರವರೊಂದಿಗೆ ಸದರಿ ಜಾಗದ ಮಣ್ಣಿನ ರಸ್ತೆಯಲ್ಲಿರುವಾಗ 2 ರಿಂದ 5 ನೇ  ಆರೋಪಿತರಾದ ನೀವು 1 ನೇ ಆರೋಪಿಯೊಂದಿಗೆ ಸೇರಿಕೊಂಡು ಕೆಎ-20/ಜೆಡ್-4544 ಮಾರುತಿ ಸ್ವಿಫ್ಟ್ ಕಾರಿನಲ್ಲಿ ಅಪರಾಧ ಮಾಡುವ ಏಕೋದ್ದೇಶವನ್ನು ಹೊಂದಿ, ಅಕ್ರಮ ಗುಂಪು ಕಟ್ಟಿಕೊಂಡು ಸದರಿ ಜಾಗಕ್ಕೆ ಪ್ರವೇಶ ಮಾಡಿದ್ದೀರಿ. ಆದ್ದರಿಂದ ನೀವು ಭಾ.ದಂ.ಸಂ.ಕಲಂ 143 ಸಹ ಕಲಂ 149 ರಡಿಯಲ್ಲಿ ದಂಡನೀಯ

ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಮೇಲೆ ಹೇಳಿದ ವೇಳೆ, ಸ್ಥಳ ಮತ್ತು ದಿನಾಂಕದಂದು ಮುಂದುವರೆದು, 2 ರಿಂದ 5 ನೇ ಆರೋಪಿಗಳಾದ ನೀವು 1 ನೇ ಆರೋಪಿಯೊಂದಿಗೆ ಸೇರಿಕೊಂಡು ಅಪರಾಧ ಮಾಡುವ ಏಕೋದ್ದೇಶವನ್ನು ಹೊಂದಿ, ಅಕ್ರಮ ಗುಂಪು ಕಟ್ಟಿಕೊಂಡು, ದೊಂಬಿ ಮಾಡಿರುತ್ತೀರಿ. ಆದ್ದರಿಂದ ನೀವು ಭಾ.ದಂ.ಸಂ.ಕಲಂ 147 ಸಹ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಮೇಲೆ ಹೇಳಿದ ವೇಳೆ, ಸ್ಥಳ ಮತ್ತು ದಿನಾಂಕದಂದು ಮುಂದುವರೆದು, 2 ರಿಂದ 5 ನೇ ಆರೋಪಿಗಳಾದ ನೀವು 1 ನೇ ಆರೋಪಿಯೊಂದಿಗೆ ಸೇರಿಕೊಂಡು ಅಪರಾಧ ಮಾಡುವ ಏಕೋದ್ದೇಶವನ್ನು ಹೊಂದಿ, ಕಾರ್ ನಂಬರ್ ಕೆಎ-20/ ಜೆಡ್-4544 ರಲ್ಲಿ ಹೋಗಿ ಚಾಸಾ.1 ರವರ ಜಾಗಕ್ಕೆ ಅತಿಕ್ರಮ ಪ್ರವೇಶ ಮಾಡಿದ್ದೀರಿ. ಆದ್ದರಿಂದ ನೀವು ಭಾ.ದಂ.ಸಂ.ಕಲಂ 447 ಸಹ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಮೇಲೆ ಹೇಳಿದ ವೇಳೆ, ಸ್ಥಳ ಮತ್ತು ದಿನಾಂಕದಂದು ಮುಂದುವರೆದು, 2 ರಿಂದ 5 ನೇ ಆರೋಪಿಗಳಾದ ನೀವು 1 ನೇ ಆರೋಪಿಯೊಂದಿಗೆ ಸೇರಿಕೊಂಡು ಅಪರಾಧ ಮಾಡುವ ಏಕೋದ್ದೇಶವನ್ನು ಹೊಂದಿ, ಕಾರ್ ನಂಬರ್ ಕೆಎ-20/ ಜೆಡ್-4544 ರಲ್ಲಿ ಹೋಗಿ ಚಾಸಾ.1 ರವರ ಜಾಗಕ್ಕೆ ಹೋಗಿ 1 ನೇ ಆರೋಪಿತನು ಚಾಸಾ.1 ರವರನ್ನು ತಳ್ಳಿ ಕೆಳಗೆ ಬೀಳಿಸಿದ್ದೀರಿ. ಆದ್ದರಿಂದ ನೀವು ಭಾ.ದಂ.ಸಂ.ಕಲಂ 323 ಸಹ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಮೇಲೆ ಹೇಳಿದ ವೇಳೆ, ಸ್ಥಳ ಮತ್ತು ದಿನಾಂಕದಂದು ಮುಂದುವರೆದು, 2 ರಿಂದ 5 ನೇ ಆರೋಪಿಗಳಾದ ನೀವು 1 ನೇ ಆರೋಪಿಯೊಂದಿಗೆ ಸೇರಿಕೊಂಡು ಅಪರಾಧ ಮಾಡುವ ಏಕೋದ್ದೇಶವನ್ನು ಹೊಂದಿ ಚಾಸಾ.1 ರವರಿಗೆ ಸೂಳೆಮಗ ಬೋಳಿಮಗ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದೀರಿ. ಆದ್ದರಿಂದ ನೀವು ಭಾ.ದಂ.ಸಂ.ಕಲಂ 504 ಸಹ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಮೇಲೆ ಹೇಳಿದ ವೇಳೆ, ಸ್ಥಳ ಮತ್ತು ದಿನಾಂಕದಂದು ಮುಂದುವರೆದು, 2 ರಿಂದ 5 ನೇ ಆರೋಪಿಗಳಾದ ನೀವು 1 ನೇ ಆರೋಪಿಯೊಂದಿಗೆ ಸೇರಿಕೊಂಡು ಅಪರಾಧ ಮಾಡುವ ಏಕೋದ್ದೇಶವನ್ನು ಹೊಂದಿ ಚಾಸಾ.1 ರವರಿಗೆ ನಿನ್ನನ್ನು ಕಡಿಯುತ್ತೇನೆ, ಕೊಲ್ಲುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿದ್ದೀರಿ. ಆದ್ದರಿಂದ ನೀವು ಭಾ.ದಂ.ಸಂ.ಕಲಂ 506 ಸಹ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಪ್ರ:1ಃ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೆ?

ಉಃ ಆ-2 ತಿಳಿಯಿತು ಆ-3 ತಿಳಿಯಿತು

ಆ-4 ತಿಳಿಯಿತು ಆ-5 ತಿಳಿಯಿತು

ಪ್ರ:2ಃ ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕಾ?

ಉಃ ಆ-2 ವಿಚಾರಣೆಯಾಗಬೇಕು ಆ-3 ವಿಚಾರಣೆಯಾಗಬೇಕು

ಆ-4 ವಿಚಾರಣೆಯಾಗಬೇಕು ಆ-5 ವಿಚಾರಣೆಯಾಗಬೇಕು

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿತರಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಡೀಕರಿಸುತ್ತೇನೆ.

ದಿನಾಂಕ 25.11.2025 ಸಹಿ/- 25.11.2025.

(ಶ್ರೀಮತಿ ನಂದಿನಿ ಎಂ.ಎನ್. )
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ ಕೊಪ್ಪ.